# "ವಚನವೇದ" ಓದಿದ ಮೇಲೆ ಇನ್ನ್ಯಾತರ ಓದು!

ಕೋ.ಚೆನ್ನಬಸಪ್ಪ

**ಹಲವಾರು ಸ್ವತಂತ್ರ ಕೃತಿಗಳು ಮತ್ತು ಅನುವಾದಗಳಿಂದ ಕನ್ನಡ ಓದುಗರಿಗೆ ಚಿರಪರಿಚಿತರಾದ ಶ್ರೀ ಕೋ.ಚೆನ್ನಬಸಪ್ಪನವರು "ಶ್ರೀರಾಮಕೃಷ್ಣ ವಚನವೇದ" ವೇದವೇದಾಂತಗಳ ಸಾರಸರ್ವಸ್ವ ಎಂಬುದನ್ನು ಸಮರ್ಥಿಸುತ್ತಾರೆ.**

ನನ್ನ ಅತ್ಯಂತ ಆಪ್ತರೊಬ್ಬರು ತಮ್ಮ ಮನೆಯಲ್ಲಿ ಜಗದ್ಗುರುಗಳೊಬ್ಬರ ಪಾದಪೂಜೆಯನ್ನು ಇಟ್ಟುಕೊಂಡಿರುವುದಾಗಿಯೂ ಬಂದು ಪೂಜೆಯಲ್ಲಿ ಪಾಲ್ಗೊಂಡು ಗುರುಗಳ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿ ಹೋಗಬೇಕೆಂದೂ ಕರೆದರು. ಅಂದು ಕೆಲಸದ ದಿನವಾದ್ದರಿಂದ ಕೆಲಸ ಬಿಟ್ಟು ಬರುವುದು ಕಷ್ಟವಾಗುವುದೆಂದು ಹೇಳಿದೆ. ಅವರು ಪಟ್ಟು ಬಿಡದೆ ಬರಲೇಬೇಕೆಂದು ಒತ್ತಾಯಿಸಿದ್ದರಿಂದ ಮಧ್ಯಾಹ್ನದ ಊಟದ ವೇಳೆಯಲ್ಲಿ ಅವರ ಮನೆಗೆ ಹೋದೆ. ಅಷ್ಟು ಹೊತ್ತಿಗೆ ಪಾದಪೂಜೆ ಮುಗಿದು ಜಗದ್ಗುರುಗಳು ದೊಡ್ಡ ಬಂಗಲೆಯ ಮೊಗಸಾಲೆಯಲ್ಲಿ ಸಿಂಹಾಸನಾರೂಢರಾಗಿದ್ದರು. ಪಾದಗಳು ರಜತ ಪಾದುಕೆಯ ಮೇಲೆ ವಿರಾಜಮಾನವಾಗಿದ್ದವು. ನೆಲದಮೇಲೆ ಭಕ್ತಗಣ ಕುಳಿತಿತ್ತು. ಅವರಲ್ಲಿ ಒಬ್ಬಿಬ್ಬರು ನಿವೃತ್ತ ನ್ಯಾಯಮೂರ್ತಿಗಳೂ ಇದ್ದರು. ನಾನು ಹೋದಾಗ ಶ್ರೀಶ್ರೀ ಸ್ವಾಮಿಗಳು: "ಗುರುವಿನ ಮಹಿಮೆಯನ್ನು ವರ್ಣಿಸುವುದು ಅಸಾಧ್ಯ. ಋಷಿವರೇಣ್ಯರು ಘೋಷಿಸಿರುವಂತೆ:

**ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುದೇವೋ ಮಹೇಶ್ವರಃ |**
**ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ ||**
**ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ |**
**ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ ||**

ಜಗದ್ಗುರುಗಳು ಈ ಶ್ಲೋಕವನ್ನು ಉಚ್ಚಕಂಠದಿಂದ ಹೇಳುತ್ತಾ, ವಜ್ರಖಚಿತ ಉಂಗುರಗಳನ್ನು ಧರಿಸಿದ್ದ ಬೆರಳುಗಳನ್ನು ಮೇಲಕ್ಕೆತ್ತಿ, ಅತ್ತಿತ್ತ ಭಕ್ತವೃಂದವನ್ನು ನೋಡುತ್ತ ಮೇಲಿನ ಶ್ಲೋಕದ ಅರ್ಥವನ್ನು ವಿಸ್ತರಿಸಿದರು. ಮುಂದುವರಿದು, "ಗುರು ಎನ್ನುವ ಮಾತಿನ ಅರ್ಥವನ್ನು ಆರ್ಷೇಯ ದಾರ್ಶನಿಕರು ಈ ರೀತಿಯಾಗಿ ವ್ಯಾಖ್ಯಾನಿಸಿದ್ದಾರೆ:

**ಗುಕಾರಃ ಅಂಧಕಾರಸ್ಯಾತ್ ರೇಫಸ್ಯಾತ್ ತನ್ನಿವಾರಕಃ |**
**ಅಂಧಕಾರನಿರೋಧಿತ್ವಾತ್ ಗುರುರಿತ್ಯಭಿಧೀಯತೇ ||**

ಅಂದ್ರೆ ಏನಪಾ ಅಂದ್ರೆ,: **ಗು** ಎಂದರೆ ಅಂಧಕಾರ — **ರು** ಎಂದರೆ ಅದನ್ನು ನಿವಾರಿಸುವ ಅಥವಾ **ನಿರೋಧಿತ್ವಾತ್** = ಹೋಗಲಾಡಿಸುವವನನ್ನು **ಗುರುವೆಂದು** ಕರೆಯುತ್ತಾರೆ.

ಜಗದ್ಗುರುಗಳ ವ್ಯಾಖ್ಯಾನ ಪುಂಖಾನುಪುಂಖವಾಗಿ ಸಾಗಿತ್ತು. ನಾನು ಅದನ್ನೆಲ್ಲ ಕೇಳುತ್ತ ಮನದಲ್ಲೇ ಅಂದುಕೊಳ್ಳುತ್ತಿದ್ದೆ : "ಅಂಧಕಾರವನ್ನು ಹೋಗಲಾಡಿಸುವವನು (ರು) ಸೂರ್ಯ. ಅಂಧಕಾರ ಎಂದರೆ ಯಾವ ಅಂಧಕಾರ? 'ಅಜ್ಞಾನ ತಿಮಿರಾಂಧ' ಅಂತ ಮೇಲೆ ಹೇಳಿದ್ದಾರಲ್ಲ? ಹೌದು ಯಾವುದರ ಬಗ್ಗೆ ಅಜ್ಞಾನ?" ಹೀಗೆ ಜಗದ್ಗುರುಗಳ "ಗುರು" ಶಬ್ದದ ವ್ಯಾಖ್ಯಾನ ತರ್ಕದ ಸರಪಳಿಯನ್ನೇ ಮನದಲ್ಲಿ ಸೃಷ್ಟಿಸಿತ್ತು. ಆ ಸರಪಳಿ ಬುದ್ಧಿ ಚಿತ್ತವನ್ನು ಬಲವಾಗಿ ಬಂಧಿಸಿ ಭಕ್ತಿಗೆ ಉಸಿರುಕಟ್ಟುವಂತೆ ಮಾಡಿತು. ನಾನು ಸುಮ್ಮನೆ ಕೂತಿದ್ದೆ. ಸ್ವಲ್ಪ ಹೊತ್ತಿನಲ್ಲಿ ವ್ಯಾಖ್ಯಾನ ಮುಗಿಯಿತು.

ನನಗಿಂತ ಮೊದಲು ಬಂದಿದ್ದ ಆ ನ್ಯಾಯಮೂರ್ತಿಗಳು ತಂದಿದ್ದ ಹಣ್ಣುಕಾಯಿಗಳನ್ನು ಸ್ವಾಮಿಗಳಿಗೆ ಅರ್ಪಿಸಿ ಹೂಮಾಲೆಯನ್ನು ಸ್ವಾಮಿಗಳ ಕೊರಳಿಗೆ ಹಾಕಿ ನಿಂತರು. ಸ್ವಾಮಿಗಳು ತಮ್ಮ ಕೊರಳಿನಲ್ಲಿದ್ದ ಹೂಮಾಲೆಯನ್ನು ಅವರ ಕೊರಳಿಗೆ ಹಾಕಿ ಮತ್ತೊಂದು ಸಂಸ್ಕೃತ ಶ್ಲೋಕ ಪಠಿಸಿ ಆಶೀರ್ವದಿಸಿದ ಬಳಿಕ ಆ ನ್ಯಾಯಮೂರ್ತಿಗಳು ನಿರ್ಗಮಿಸಿದರು. ಅವರು ಕಣ್ಮರೆಯಾದ ಮೇಲೆ ಸ್ವಾಮಿಗಳು ತಮ್ಮ ಮಠದ ಶಿಷ್ಯನನ್ನು ಕುರಿತು:

"ಹ್ಯಾಗಾಯಿತೋ 'ಗುರು' ವ್ಯಾಖ್ಯಾನ?" ಎಂದು ಕೇಳಿದರು. ಆ ಶಿಷ್ಯ, "ಘನವಾಗಿ ಆಯಿತು ಬುದ್ದೀ. ನ್ಯಾಯಾಧೀಶ ದಂಗಾಗಿ ಹೋದ" ಎಂದನು.

ಈ ಉತ್ತರ ಕೇಳಿ ಸ್ವಾಮಿಗಳು ಸಂತೃಪ್ತಿಯ ಮಂದಹಾಸ ಬೀರಿ ಮುಂದಿದ್ದವರತ್ತ ಕೃಪಾದೃಷ್ಟಿ ಬೀರಿದರು. ಸ್ವಾಮಿಗಳ ಈ ಮಾತು ಈ ನಡತೆಯನ್ನು ಕೇಳಿ, ನೋಡಿ ನನಗೆ ಹೇಗಾಯಿತೆಂಬುದನ್ನು ಬಲ್ಲವರು ಊಹಿಸಿಕೊಳ್ಳುವುದು ಸುಲಭ. ಬಿಡಿಸಿ ಹೇಳಬೇಕಾಗಿಲ್ಲ.

ಜಗದ್ಗುರುಗಳು "ಗುರು"ವಿನ ಬಗ್ಗೆ ಮಾಡಿದ ಈ ವ್ಯಾಖ್ಯಾನದಿಂದ ಕೇಳಿದವರ ಅಜ್ಞಾನ ತಿಮಿರಾಂಧಕಾರ ಎಷ್ಟರಮಟ್ಟಿಗೆ ಹರಿಯಿತೊ, ಜ್ಞಾನಾಂಜನ ಶಲಾಕೆ ಕಣ್ಣು ತೆರೆಯಿಸಿ ಕೋರೈಸುವಂತೆ ಮಾಡಿತೊ ಹೇಳಲಾರೆ! ಅಲ್ಲಿಗೆ ಹೋಗಿ ಒಂದು ಗಂಟೆ ವೇಳೆ ಸುಮ್ಮನೆ ಹೋಯಿತೆಂದು ನಾನು ಹಳಹಳಿಸಿದೆ.

ಗುರುವಿನ ಬಗ್ಗೆ ಶ್ರೀರಾಮಕೃಷ್ಣ ಪರಮಹಂಸರು ಏನು ಹೇಳುತ್ತಾರೆ ಎಂಬುದನ್ನು ಜ್ಞಾಪಿಸಿಕೊಂಡೆ. ನೆನಪಾದ ಮಾತುಗಳನ್ನು ವಚನವೇದದಲ್ಲಿ ಓದಿ ಆ ಜಗದ್ಗುರುಗಳು ಹರಡಿದ ವಾಗ್ಜಾಲದ ಕುಣಿಕೆಯಿಂದ ಬಿಡಿಸಿಕೊಳ್ಳಲು ಹವಣಿಸಿದೆ. ಹಾಗೆಯೇ ವಚನವೇದ (ಪೂರ್ವಾರ್ಧ)ದ ಹಾಳೆ ತಿರುವಿದೆ. ಕಣ್ಣಿಗೆ ಬಿತ್ತು (ಪು. ೨೧೮):

ಚೌಧುರಿ : ಮಹಾಶಯರೆ, ಗುರುವಿಲ್ಲದೆ ಭಗವಂತನ ಸಾಕ್ಷಾತ್ಕಾರ ದೊರೆಯೋದಿಲ್ಲವೇ?

ಶ್ರೀರಾಮಕೃಷ್ಣರು : ಸಚ್ಚಿದಾನಂದವೇ ಗುರು.... ಯಾರು ಗುರುವೊ ಅವನೇ ಇಷ್ಟದೈವ. ಗುರು ಭಗವಂತನೆಡೆಗೆ ಕರೆದೊಯ್ಯುವ ನೂಲು (ದಾರ).....

ಶ್ರೀರಾಮಕೃಷ್ಣರ ಈ ಮಾತು ಕೇಳಿದೊಡನೆ ಕೂಡಲೇ ಅರ್ಥವಾಯಿತು : ಗುರು ಎಂದರೆ ಭಗವಂತನೆಡೆಗೆ ಭಕ್ತನನ್ನು ಕರೆದೊಯ್ಯುವ ಮಾರ್ಗದರ್ಶಿ ಅಂತ. ಗುರುವಿಗೆ ಗುರಿ ಗೊತ್ತು. ಅವನು ಆಗಲೇ ಅಲ್ಲಿಗೆ ಹೋಗಿ ಬಂದಿದ್ದಾನೆ. ದಾರಿ ಗೊತ್ತಿದೆ. ದಾರಿ ಗೊತ್ತಿಲ್ಲದ ಈ ಹೊಸಬ (ಭಕ್ತ)ನನ್ನು ಸಲೀಸು ಕರೆದು ಕೊಂಡು ಹೋಗುತ್ತಾನೆ. ಗುರು ಒಂದು ಹೆಜ್ಜೆ ಮುಂದೆ ಇದ್ದು ಹಿಂದೆ ಬಿದ್ದು ದಾರಿ ತಪ್ಪದಿರಲೆಂದು ಭಕ್ತನ ಕೈಗೆ ದಾರವನ್ನು ಕೊಟ್ಟು ಆ ದಾರದ ಇನ್ನೊಂದು ಕೊನೆ (ತುದಿ)ಯನ್ನು ತಾನು ಹಿಡಿದುಕೊಂಡು ಮುಂದೆ ಮುಂದೆ ಹೋಗುತ್ತಾನೆ. ದಾರ (ದಾರಿ) ಹಿಡಿದು ಭಕ್ತ ಕಣ್ಮುಚ್ಚಿಕೊಂಡು ಹಿಂದೆ ಹಿಂದೆ ಹೋಗಬಹುದು. ದಾರಿ ತಪ್ಪುವ, ಮುಗ್ಗರಿಸಿ ಬೀಳುವ ಅಪಾಯವೇ ಇಲ್ಲ.

ಶ್ರೀರಾಮಕೃಷ್ಣರ ದಾರದ ಉಪಮೆ ಓದಿದಾಗ ಲಿಂಗಾಯತ ಗುರುಗಳು ಶಿಶುವಿಗೆ ಪ್ರಥಮ ಬಾರಿ ಲಿಂಗಧಾರಣೆ ಮಾಡುವಾಗ ಆಚರಿಸುವ ಒಂದು ಆಚರಣೆ ನೆನಪಾಯಿತು. ಗುರುದೇವರು ಮನೆಯಲ್ಲಿ ಗದ್ದುಗೆಯ ಮೇಲೆ ಕುಳಿತಿರುತ್ತಾರೆ. ಅವರು ಒಂದು ನೂಲಿನ ದಾರವನ್ನು ಹೆರಿಗೆ ಮನೆಯಲ್ಲಿನ ನವಜಾತ ಶಿಶುವಿನ ಮುಂಗೈಗೆ ಕಟ್ಟಿಸುತ್ತಾರೆ. ಆ ದಾರವನ್ನು ಗುರು ಕೈಬೆರಳಿಗೆ ಸುತ್ತಿಕೊಳ್ಳುವಾಗ ತಾಯಿ ಮಗುವಿನೊಡನೆ ದಾರ ಸುತ್ತಿಕೊಂಡಂತೆಲ್ಲ ನಿಧಾನವಾಗಿ ಸರಿಯುತ್ತ ಗುರುಗಳ ಬಳಿ ಬರುತ್ತಾಳೆ. ಸಮ್ಮುಖಕ್ಕೆ ಬಂದಾಗ ಗುರು ಶಿಶುವಿನ ಕೈಯಲ್ಲಿ ಲಿಂಗವನ್ನಿಟ್ಟು (ಬಟ್ಟೆಯಲ್ಲಿಟ್ಟು ಕಟ್ಟಿ) ಕಿವಿಯಲ್ಲಿ ಮಂತ್ರೋಪದೇಶ ಮಾಡುತ್ತಾರೆ. ಶ್ರೀರಾಮಕೃಷ್ಣರು ಗುರು ದಾರಿತೋರುವ ದಾರ—ಮಾರ್ಗದರ್ಶಕ—ಎಂದು ಹೇಳಿದಾಗ ಎಂಥ ಅಗಾಧ ಸತ್ಯವನ್ನು ಎಂಥ ಸರಳವಾದ ಮಾತಿನಲ್ಲಿ ಹೇಳಿದ್ದಾರಲ್ಲ! ನಮ್ಮ ಆಚರಣೆಯಲ್ಲಿರುವ ಮರೆತು ಹೋದ ಅರ್ಥವನ್ನು ಹೇಳಿ ಅಷ್ಟು ದೂರ ಕುಳಿತು ವಿವರಿಸಿದ್ದಾರಲ್ಲ!!

ಗುರುಮಹಾರಾಜರ ಈ ಮಹಾಮಹಿಮೆಯನ್ನು ಕುರಿತು ಆಲೋಚಿಸುತ್ತ ಹಾಗೆಯೇ ವಚನವೇದದ ಹಾಳೆಗಳನ್ನು ತಿರುವುತ್ತಿದ್ದಾಗ "ಬ್ರಾಹ್ಮಭಕ್ತರೊಡನೆ ಶ್ರೀರಾಮಕೃಷ್ಣರು" ಎಂಬ ಅಧ್ಯಾಯದಲ್ಲಿ ಕೆಂಪು ಪೆನ್ಸಿಲ್ ಗುರುತು ಮಾಡಿದ ಈ ಭಾಗ ಕಣ್ಣಿಗೆ ಬಿತ್ತು ( ಪು. ೨೬೬):

ಬ್ರಾಹ್ಮಭಕ್ತ : ಮಹಾಶಯರೆ, ಗುರುವಿಲ್ಲದೆ ಇದ್ದರೆ ಜ್ಞಾನ ದೊರೆಯೋದಿಲ್ಲವೇ?

ಶ್ರೀರಾಮಕೃಷ್ಣರು : ಕೇವಲ ಸಚ್ಚಿದಾನಂದವೇ ಗುರು.... ಗುರುವಿನ ಪಟ್ಟ ಧರಿಸಿ ಜನರಲ್ಲಿ ಆತ್ಮಜಾಗೃತಿಯನ್ನುಂಟು ಮಾಡಿದ್ರೇ ಆದರೆ ಆಗ ತಿಳಿದುಕೊಳ್ಳಬೇಕು ಸಚ್ಚಿದಾನಂದವೇ ಆ ರೂಪ ಧರಿಸಿದ್ದಾನೆ ಎಂಬುದಾಗಿ. ಗುರು ಒಬ್ಬ ಸ್ನೇಹಿತ ಇದ್ದಹಾಗೆ. ಆತ ಕೈಹಿಡಿದು ಕರೆದುಕೊಂಡು ಹೋಗುತ್ತಾನೆ...

ಎಷ್ಟು ಸರಳವಾಗಿ ಗುರುವಿನ ಗುಣವನ್ನು ಈ ಪರಮಕರುಣಾಸಿಂಧು ಪರಮಹಂಸರು ಹೇಳುತ್ತಾರಲ್ಲ!! ಇದನ್ನು ಓದಿದ ಮೇಲೆ ಮತ್ತೆ ಇನ್ನಾವ ಭಕ್ತಿಸೂತ್ರಗಳನ್ನು, ಬ್ರಹ್ಮಸೂತ್ರಗಳನ್ನು ಓದಬೇಕು? ಇನ್ನೊಂದು ಕಡೆ ವಚನವೇದದಲ್ಲಿ ಒಂದು ಸಂವಾದ ಬರುತ್ತದೆ. "ಠಾಕೂರ್, ಅಂಥ ಗುರು ಹೇಗೆ ಸಿಕ್ಕುತ್ತಾನೆ?" ಎಂದು ಕೇಳಿದ ಪ್ರಶ್ನೆಗೆ,

> ಓದು ಬರುವ ಅತ್ಯಂತ ಸಾಮಾನ್ಯನು "ಶ್ರೀರಾಮಕೃಷ್ಣ ವಚನವೇದ"ವನ್ನು ಓದಿದ ಮೇಲೆ ಯಾವ ಪಂಡಿತನಿಗೂ ಕರುಬುವ ಆವಶ್ಯಕತೆಯಿಲ್ಲ. ಯಾವ ವಿದ್ವತ್ಪೂರ್ಣನಾದ ತತ್ತ್ವಜ್ಞಾನಿಗೂ ಕೀಳೆಂದು ನಾಚಬೇಕಾಗಿಲ್ಲ.
>
> —ಕುವೆಂಪು

"ನಿನ್ನಲ್ಲಿ ಭಗವದ್ದರ್ಶನದ ಆಕಾಂಕ್ಷೆ ಉತ್ಕಟವಾದಾಗ, ಕಾತರ ತುಂಬಿದೇವರ ದರ್ಶನಕ್ಕಾಗಿ ಕಣ್ಣೀರು ಸುರಿಸಿದಾಗ ದೇವರೇ ಗುರು ರೂಪದಲ್ಲಿ ನೀನು ಇದ್ದಲ್ಲಿಗೇ ಬರುತ್ತಾನೆ. ಭಕ್ತ ಭಗವಂತನ ಕಡೆಗೆ ಒಂದು ಹೆಜ್ಜೆ ಹಾಕಿದರೆ ಭಗವಂತ ಭಕ್ತನೆಡೆಗೆ ಹತ್ತು ಹೆಜ್ಜೆ ಕುಪ್ಪಳಿಸಿ ಹಾರಿ ಬರುತ್ತಾನೆ. ಬೇಕಾಗಿರೋದು ಆ ಉತ್ಕಟ ಕಾತರ. ಹೆಣ್ಣು, ಮಣ್ಣು, ಹೊನ್ನಿಗಾಗಿ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾರೆ. ದೇವರಿಗಾಗಿ ಅಳುವವರು ವಿರಳ....."

ಇನ್ನೊಮ್ಮೆ ಒಬ್ಬ ಶಿಷ್ಯ ಕೇಳುತ್ತಾನೆ: ಮಹಾರಾಜ್ ಆ ಉತ್ಕಟ ಆಕಾಂಕ್ಷೆ ಅಂದ್ರೆ ಏನು?

ಪರಮಹಂಸರು : ಒಮ್ಮೆ ಒಬ್ಬ ಗುರು ಶಿಷ್ಯನೊಡನೆ ನದಿಗೆ ಸ್ನಾನಕ್ಕಾಗಿ ಹೋದ. ನಡು ಹೊಳೆಗೆ ಹೋದಮೇಲೆ ಗುರು ಶಿಷ್ಯನನ್ನು ನೀರಲ್ಲಿ ಮುಳುಗಿಸಿ ಅಮುಕಿ ಹಿಡಿದುಕೊಂಡ! ಶಿಷ್ಯ ಒದ್ದಾಡಿ ಒದ್ದಾಡಿ ಕಷ್ಟಪಟ್ಟು ಬಿಡಿಸಿಕೊಂಡು ನೀರಿನಿಂದ ಮೇಲೆದ್ದ. ಆಗ ಗುರು ಕೇಳಿದ: "ನೀರಲ್ಲಿ ಮುಳುಗಿದ್ದಾಗ ನಿನಗೆ ಹೇಗೆ ಆಗುತ್ತಿತ್ತು?" ಶಿಷ್ಯ ಹೇಳಿದ: "ಒಂದೇ ಒಂದು ಉಸಿರು ಗಾಳಿ ಸಿಕ್ಕರೆ ಸಾಕು. ಜಗತ್ತಿನಲ್ಲಿ ಇನ್ನೇನೂ ಬೇಡ ಅನಿಸುತ್ತಿತ್ತು." ಆಗ ಗುರು ಹೇಳಿದ: "ಅಗೋ, ಹಾಗೆ ಭಗವಂತನ ದರ್ಶನಕ್ಕಾಗಿ ಚಡಪಡಿಸಿದಾಗ ಅದು ಉತ್ಕಟ ಕಾತರ!" ವಚನವೇದ ಓದಿದ ಮೇಲೆ ಇನ್ನಾತರ ಗ್ರಂಥಪಠನ ಬೇಕು?